ಓ.ಎಸ್.ನಂ. 161/12
ಪಿ.ಡಬ್ಲ್ಯೂ 1

ದಿಃ 11-08-2015 ರಂದು ಮುಖ್ಯವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷ್ಯರೂಪದಲ್ಲಿ ಹಾಜರು ಪಡಿಸಿರುವ ಪ್ರಮಾಣಪತ್ರದಲ್ಲಿನ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿದ್ದೇನೆ.

ವಾದಿ ಪರ ವಕೀಲರು ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ.

1. ದಿನಾಂಕ 13-03-1973ರ ಭೋಗ್ಯ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ನಿಪಿ.1 ಎಂದು,
2. ಋಣಭಾರ ಪತ್ರವನ್ನು ಹಾಜರು ಪಡಿಸಿದ್ದು ನಿಪಿ.2 ಎಂದು,
3. ನೋಟೀಸ್‌ನ್ನು ಹಾಜರು ಪಡಿಸಿದ್ದು ನಿಪಿ.3 ಎಂದು,
4. ಅಂಚೆ ರಸೀದಿಯನ್ನು ಹಾಜರು ಪಡಿಸಿದ್ದು ನಿಪಿ.4 ಎಂದು,
5. 2 ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರು ಪಡಿಸಿದ್ದು ನಿಪಿ.5 ಮತ್ತು 6 ಎಂದು,
6. ಪಹಣಿ ಪತ್ರವನ್ನು ಹಾಜರು ಪಡಿಸಿದ್ದು ನಿಪಿ.7 ಎಂದು,
7. ಪಟ್ಟಾ ಪುಸ್ತಕವನ್ನು ಹಾಜರು ಪಡಿಸಿದ್ದು ನಿಪಿ.8 ಎಂದು,
8. ತೆರಿಗೆ ರಸೀದಿಯನ್ನು ಹಾಜರು ಪಡಿಸಿದ್ದು ನಿಪಿ.9 ಎಂದು,
9. ವಂಶ ವೃಕ್ಷವನ್ನು ಹಾಜರು ಪಡಿಸಿದ್ದು ನಿಪಿ.10 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸ.ಇದೆ.,

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ನೆಲಮಂಗಲ